
ಬಣ್ಣ ಮಾಸಿ, ಕೈಕಾಲುಗಳು ಸೋತು ಮನಸ್ಸು ನೊಂದಾಗ, ಒಂಟಿಯಾಗಿ ಕೂತಾಗ ನೆನಪಾಗುವ ಹಾಡು 'ಈ ಭೂಮಿ ಬಣ್ಣದ ಬುಗುರಿ... ಆ ಶಿವನೇ ಚಾಟಿ ಕಣೋ, ಈ ಬಾಳು ಸುಂದರ ನಗರಿ ನೀನದರ ಮೇಟಿ ಕಣೋ...' ಎಂಬ ಹಾಡು ಕೇಳಿ ಮನಸ್ಸಿನ ದುಗುಡವನ್ನು ಮರೆಯುವವರಿದ್ದಾರೆ. ಬಾಳು– ಭೂಮಿ ಸುಂದರ ಎನ್ನುವುದಾದರೆ ಅದು ಬಣ್ಣಗಳಿಂದ ಸಾಧ್ಯವಾಗುತ್ತದೆ. ಬಣ್ಣಂ ಸರ್ವಮಯಂ.

ನವಿಲಿಗೆ ಚಿತ್ರ ಬರೆದವರು ಯಾರು? ಪವಳದ ಲತೆಗೆ ಕೆಂಪಿಟ್ಟವರು ಯಾರು? ಸವಿ ಮಾತಿನರಗಿಳಿಗೆ ಹಸುರು ಬರೆದವರು ಯಾರು? ಅವನೇ ಯಾರು? ಅವನು ಎಂದರೆ ಜಗತ್ತಿನ ಚರಾಚರಗಳ ಬದುಕಿನ ಹಿಂದೆ ಸೃಷ್ಟಿಯ ಕೈಚಳಕದ ಕರಾಮತ್ತಿದೆ ಎನ್ನುವುದಕ್ಕೆ ಕನಕದಾಸರ 'ತಲ್ಲಣಿಸದಿರು ಕಂಡ್ಯ ತಾಳು ಮನವೇ' ಪದ್ಯ ಪೂರಕವಾಗಿರಬಹುದಾ?. ಅವನು ಎಂಬ ಪುಲ್ಲಿಂಗ ಶಬ್ದಕ್ಕೆ ಸೃಷ್ಟಿಕರ್ತ ಎನ್ನಬಹುದೇ? ಹಾಗೆ ನೋಡಿದರೆ ಕವಿಗಳ ಕಾವ್ಯ ರಚನೆಯಲ್ಲಿ ಬಣ್ಣಗಳು ಮೇಳೈಸಿವೆ. ಕುವೆಂಪು ಅವರು ತಮ್ಮ ಕೃತಿ-ಕಾವ್ಯಗಳಲ್ಲಿ ಹಸುರು ಬಣ್ಣವನ್ನು ಮೆರೆಸಿದ್ದಾರೆ. ತಮ್ಮ 'ಪಕ್ಷಿಕಾಶಿ' ಕವನಸಂಕಲನದಲ್ಲಿ ಬರುವ 'ಹಸುರು' ಎಂಬ ಕವಿತೆಯಲ್ಲಿ



'ಹಸುರಾಗಸ ಹಸುರು ಮುಗಿಲು ಹಸುರು ಗದ್ದೆಯಾ ಬಯಲು ಹಸುರಿನಮಲೆ ಹಸುರು ಕಣಿವೆ ಹಸುರು ಸಂಜೆಯೀ ಬಿಸಿಲು. ಹೊಸ ಹೂವಿನ ಕಂಪು ಹಸುರು ಎಲರಿನ ತಂಪು ಹಸುರು ಹಕ್ಕಿಯಕೊರಲಿಂಪು ಹಸುರು. ಹಸುರು ಹಸುರಿಳೆಯುಸಿರು...'

ಹೀಗೆ ಇಡೀ ಪದ್ಯ ಹಸರುಮಯವಾಗಿದೆ ಇದು ಸಕಾರಾತ್ಮಕ ಬಯಲಾಗುವಿಕೆ. ಆದರೆ, 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಪದ್ಯದಲ್ಲಿ ಜೋಗಿ, ಕಿಂದರಿ ಬಾರಿಸಿದೊಡನೆ ನಾನಾ ಬಣ್ಣದ ಇಲಿಗಳು ಓಡೋಡಿ ಬರುತ್ತವೆ. ಕೆಂಪಿನ ಇಲಿಗಳು, ಹಳದಿಯ ಇಲಿಗಳು ಬೆಳ್ಳಿಲಿ, ಕರಿಯಿಲಿ, ಕುಂಕುಮ ರಾಗದ, ಚಂದನರಾಗದ ಹಸುರಿನ ಬಣ್ಣದ ಪಚ್ಚೆಯ ವರ್ಣದ ನಾನಾ ವರ್ಣದ ಇಲಿಗಳು ಬಂದವು... ಎಂಬಿತ್ಯಾದಿ ಸಾಲುಗಳನ್ನು ಓದಿದಾಗ ಬಣ್ಣಗಳ ವೈವಿಧ್ಯತೆಯ ಅರಿವಾಗುತ್ತದೆ. ಆದರೆ, ಪದ್ಯದ ಕಡೆಯಲ್ಲಿ ಮಾತಿಗೆ ತಪ್ಪಿದ ಗೌಡನ ಬಣ್ಣ ಬಯಲಾಗುತ್ತದೆ. ಇಲ್ಲಿ ಬಯಲು ಎಂದರೆ ಮೋಸ ಎಂದರ್ಥ.

ದ.ರಾ. ಬೇಂದ್ರೆಯವರ 'ಗರಿ' ಕವನ ಸಂಕಲನದಲ್ಲಿ ಬರುವ 'ಹಕ್ಕಿ ಹಾರುತ್ತಿದೆ ನೋಡಿದಿರಾ' ಪದ್ಯದಲ್ಲಿ

**ಕರಿನೆರೆ ಬಣ್ಣದ ಪುಚ್ಚಗಳುಂಟು**
**ಬಿಳಿಹೊಳೆ ಬಣ್ಣದ ಗರಿ– ಗರಿಯುಂಟು**
**ಕೆನ್ನನ ಹೊನ್ನನ ಬಣ್ಣಬಣ್ಣಗಳ**
**ರೆಕ್ಕೆಗಳೆರಡು ಪಕ್ಕದಲುಂಟು**

... ಎಂದು ಹಕ್ಕಿಯ ಬಣ್ಣದ ಸೊಗಸನ್ನು ಹೇಳುವುದರ ಜೊತೆಗೆ ಕಾಲದ ಗತಿಯನ್ನು ಹಾರುವ ಹಕ್ಕಿಯೊಂದಿಗೆ ಸಮೀಕರಿಸಿ ಪ್ರಕೃತಿಯ ಸಹಜಕ್ರಿಯೆಯೊಂದಿಗೆ ಯುಗಗಳೇ ಉರುಳಿ ಹೊಸತನಕ್ಕೆ ತೆರೆದುಕೊಳ್ಳುವ ಪ್ರಕ್ರಿಯೆಯ ಸೋಜಿಗವನ್ನು ಓದಿ ಮುಗಿಸುವ ಹೊತ್ತಿಗೆ, ಇಲ್ಲಿಯ ವಿಡಂಬನಾತ್ಮಕ ಬಯಲಾಗುವಿಕೆ ಕಣ್ಣಲ್ಲಿ ಒಂದು ಹನಿಯಾದರೂ ನೀರು ತರಿಸುತ್ತದೆ.

ಸುಮಾರು ನಲವತ್ತು ಸಾವಿರ ವರ್ಷಗಳ ಹಿಂದೆ ಮಾನವ ಕಾಡಿನ ಗಿಡಮೂಲಗಳಿಂದ, ಮಣ್ಣುಕಲ್ಲುಗಳಿಂದ, ಫಲಪುಷ್ಪಗಳಿಂದ, ಬಗೆಬಗೆಯ ಮಿಗಖಗಗಳಿಂದ ಆಗಸದಲ್ಲಿ ಅಚಾನಕ್ಕಾಗಿ ಮೂಡಿ ಮರೆಯಾಗುವ ಕಾಮನಬಿಲ್ಲು, ಮಳೆಮೋಡಗಳಿಂದ ಬಣ್ಣಗಳನ್ನು ಪರಿಚಯ ಮಾಡಿಕೊಂಡಿರಬಹುದು. ಇದರ ಹಿಂದೆ ಯಾವುದೋ ಅಗೋಚರ ಶಕ್ತಿ ಇದೆ ಎಂದು ಭಾವಿಸಿದ. ಮುಂದುವರಿದ ಕಾಲಕ್ಕೆ ಕಪ್ಪು ಮತ್ತು ಬಿಳುಪನ್ನು ಕತ್ತಲು ಮತ್ತು ಬೆಳಕಿಗೆ ಹೋಲಿಸಿದ. ತದನಂತರದ ಕಾಲಮಾನದಲ್ಲಿ ಕೆಂಪು, ಹಳದಿ, ಕಂದು, ಕಪ್ಪು, ಬಿಳಿ ಈ ಬಣ್ಣಗಳ ಕುರಿತು ಚಿಂತನಮಂಥನ ನಡೆಸತೊಡಗಿದ. ಇವನ ಕುತೂಹಲ ಮತ್ತು ಅಧ್ಯಯನಕ್ಕೆ ಮಣ್ಣು, ಪ್ರಾಣಿಗಳ ಕೊಂಬು, ಹಕ್ಕಿಗಳ ಗರಿ ಸ್ಫೂರ್ತಿಯಾದವು. ಸರ್ ಐಸಾಕ್ ನ್ಯೂಟನ್ ಹದಿನೇಳನೇ ಶತಮಾನದಲ್ಲಿ

